MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | SATURDAY | 16-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಖಾದ್ಯತೈಲ ದರ ಮತ್ತೆ ದುಬಾರಿ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಹಿಂದಿನ 6 ತಿಂಗಳಲ್ಲೇ ರೂ.15 ಕ್ಕೆ ಗರಿಷ್ಠ ನೆಗೆತ ದಾಖಲಿಸಿದ್ದು, ಹಿಂದಿನ ವಾರ ಇಂಡೋನೇಶಿಯಾದ ಪಾಮೆಣ್ಣೆ ದರವೂ ಹೆಚ್ಚಳವಾಗಿದೆ. ಸೋಯಾಬೀನ್, ಸೂರ್ಯಕಾಂತಿ ಎಣ್ಣೆ ಮತ್ತಿತರ ಪರ್ಯಾಯ ಖಾದ್ಯ ತೈಲಗಳ ದರವೂ ಹೆಚ್ಚಳವಾಗಿದೆ. ಸದ್ಯ ಬೇಡಿಕೆ ಹೆಚ್ಚಳವಿದ್ದು ಉತ್ಪಾದನೆ ಸಾಕಷ್ಟು ಇಲ್ಲದಿರುವುದರಿಂದ ದರ ಹೆಚ್ಚಳವಾಗುತ್ತಿದೆ.

## ಸೋಯಾಮೀಲ್ ರಫ್ತು 80 ಶೇಕಡಾ ಇಳಿಕೆ

2022 ರ ಮಾರ್ಚ ತಿಂಗಳಲ್ಲಿ ಭಾರತದ ಸೋಯಾಮೀಲ್ ರಫ್ತು 2021 ರ ಮಾರ್ಚಗೆ ಹೋಲಿಸಿದಾಗ 80 ಶೇಕಡಾ ಇಳಿಕೆಯಾಗಿ 2.7 ಲಕ್ಷ ಟನ್ ಗಳಿಂದ 50,000 ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಆದರೂ ಹಿಂದಿನ ತಿಂಗಳಿಗಿಂತ ಸ್ವಲ್ಪ ಮಟ್ಟಿನ ಹೆಚ್ಚಳ ದಾಖಲಿಸಿದ್ದರೂ, ಸರಾಸರಿ ರಫ್ತು ಗಾತ್ರಕ್ಕಿಂತ ಇಳಿಕೆಯಲ್ಲೇ ಮುಂದುವರಿದಿದೆ. ಚೀನಾದಲ್ಲಿ ಸೋಯಾಮೀಲ್ ದರ ವರ್ಷಾರಂಭದಿಂದಲೇ ಹೆಚ್ಚಳವಾಗುತ್ತಿದ್ದು, ಮಾರ್ಚನಲ್ಲಿ ದಾಖಲೆ ಪ್ರಮಾಣದ ದರ ಹೆಚ್ಚಳವಾಗಿದೆ. ಮಾರ್ಚ 2022 ರಲ್ಲಿ ಚೀನಾದ ಸೋಯಾಮೀಲ್ ಆಮದು 18 ಶೇಕಡಾ ಇಳಿಕೆಯಾಗಿದೆ.